ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrarbcu@gmail.com

ನಂ: ಬಿಸಿಯು/ಶೈಕ್ಷಣಿಕ/ಯು.ಜಿ ಪ್ರ. ಪ್ರ /2023-24/ ದಿನಾಂಕ:21.04.2023

## ಅಧಿಸೂಚನೆ

**ವಿಷಯ:** ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸೆಂಟ್ರಲ್ ಕಾಲೇಜು ಆವರಣದ ಮತ್ತು ಮಲ್ಲೇಶ್ವರಂ ಮಹಿಳಾ ಘಟಕ ಮಹಾವಿದ್ಯಾಲಯದಲ್ಲಿ 2023–24ನೇ ಸಾಲಿನ ಸ್ನಾತಕ ಕೋರ್ಸುಗಳ ಪ್ರವೇಶಾತಿಗೆ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

*****

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸೆಂಟ್ರಲ್ ಕಾಲೇಜು ಆವರಣದ ವಿವಿಧ ಸ್ನಾತಕ ಪದವಿ ಹಂತದ ವ್ಯಾಸಂಗಕ್ಕಾಗಿ ಮತ್ತು ಬೆಂಗಳೂರು ನಗರದ ಮಲ್ಲೇಶ್ವರಂ ಬಡಾವಣೆಯ 13ನೇ ಕ್ರಾಸ್‌ನಲ್ಲಿರುವ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ವಿಶ್ವವಿದ್ಯಾನಿಲಯದ ಮಹಿಳಾ ಘಟಕ ಕಾಲೇಜಿನ ವಿವಿಧ ಸ್ನಾತಕ ವ್ಯಾಸಂಗಗಳ ಪ್ರವೇಶಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಆಶಯದಂತೆ, ವಿದ್ಯಾರ್ಥಿ ಕೇಂದ್ರಿಕೃತ ಶಿಕ್ಷಣ ನೀಡುವುದರ ಜೋತೆಗೆ ವಿವಿಧ ಶೈಕ್ಷಣಿಕ ಹಂತಗಳಲ್ಲಿ ಪ್ರವೇಶ ಪಡೆಯುವುದು ಮತ್ತು ನಿರ್ಗಮಿಸುವುದಕ್ಕೆ ಅವಕಾಶ ನೀಡುವ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳ ವ್ಯಾಸಂಗವನ್ನು ಪ್ರಾರಂಭಿಸಲಾಗುವುದು. ವಿದ್ಯಾರ್ಥಿ ಪ್ರಥಮ ವರ್ಷ ಪೂರೈಸಿದಲ್ಲಿ ಸರ್ಟಿಫಿಕೇಟ್ ಕೋರ್ಸ್ ದ್ವಿತೀಯ ವರ್ಷ ಮುಗಿಸಿದಲ್ಲಿ ಡಿಪ್ಲೋಮ ಪ್ರಮಾಣ ಪತ್ರ ತೃತೀಯ ವರ್ಷಕ್ಕೆ ಪದವಿ, ನಾಲ್ಕನೇ ವರ್ಷಕ್ಕೆ ಆನರ್ಸ್ ಪದವಿ ಹಾಗೂ ಐದನೇ ವರ್ಷ ಮುಗಿಸಿ ಸ್ನಾತಕೋತ್ತರ ಪದವಿ ಪಡೆಯಲು ಅವಕಾಶವಿರುತ್ತದೆ.

- **ಸೆಂಟ್ರಲ್ ಕಾಲೇಜು ಆವರಣದಲ್ಲಿ ಲಭ್ಯವಿರುವ ವ್ಯಾಸಂಗ/ ವಿಷಯಗಳು**

ಭಾಷೆಗಳು: ಕನ್ನಡ, ಆಂಗ್ಲ, ಹಿಂದಿ, ಸಂಸ್ಕೃತ ಫ್ರೆಂಚ್, ಜರ್ಮನ್

1. a) ಬಿ.ಎ –Basic/Honors

ಆಯ್ಕೆ ವಿಷಯಗಳು: ಕನ್ನಡ, ಆಂಗ್ಲ, ಫ್ರೆಂಚ್, ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ

2. ಬಿ.ಎಸ್.ಡಬ್ಲ್ಯೂ – Basic/Honors

3. ಬಿ.ಎಸ್ಸಿ –Basic/Honors

ವಿಷಯಗಳು: ಜೀವರಸಾಯನಶಾಸ್ತ್ರ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಕಂಪ್ಯೂಟರ್ ವಿಜ್ಞಾನ, ಪರಿಸರವಿಜ್ಞಾನ, ಪ್ರಾಣಿಶಾಸ್ತ್ರ, ಭೌತಶಾಸ್ತ್ರ

4. ಬಿ.ಎಸ್ಸಿ (Basic /Honors: (Fashion and Apparel Design) & (Interior Design and Decoration)

5. ಬಿ.ಸಿ.ಎ– Basic/Honors

6.ಬಿ.ಕಾಂ– Basic/Honors

7.ಬಿ.ಕಾಂ–(ಫೈನಾನ್ಸ್ & ಅಕೌಂಟಿಗ್) Basic/Honors

8. .ಬಿ.ಕಾಂ–( ಬಿಸನೆಸ್ ಡೆಟಾ ಅನಾಲಿಟಿಕ್ಸ್) Basic/Honors

9. ಬಿ.ಬಿ.ಎ– Basic/Honors

II . ಮಲ್ಲೇಶ್ವರಂ ಬಡಾವಣೆಯ 13ನೇ ಕ್ರಾಸ್‌ನಲ್ಲಿರುವ ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜಿನ ಕೋರ್ಸುಗಳು:

| Sl.No | Courses | Subject |
|---|---|---|
| | **Languages** | **kannada, English, French, German, Sanskrit and Hindi** |
| 1 | B.Com- Basic/Honors | Compulsory subject |
| 2 | B.Sc - Basic/Honors | Computer Science, Physics, Mathematics, statistics, Geography |
| 3 | B.V.A- Basic/Honors | Animation, Graphic Design |
| 4 | B.A –Basic/Honors | Kannada, English, Communicative English, French, History, Economics, political Science, sociology |
| 5 | BCA- Basic/Honors | Compulsory subject |

ಆಸಕ್ತ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ Website: www.bcu.ac.in ಮತ್ತು ಆನ್‌ಲೈನ್ ನೊಂದಣಿ ಮತ್ತು ಅರ್ಜಿಸಲ್ಲಿಕೆಗಾಗಿ ಕರ್ನಾಟಕ ಸರ್ಕಾರದ ಯು.ಯು.ಸಿ.ಎಂ.ಎಸ್ ಪೋರ್ಟಲ್ https://uucms.karnataka.gov.in ಭೇಟಿ ನೀಡಲು ತಿಳಿಸಲಾಗಿದೆ.

ಪ್ರವೇಶಾತಿ ಪ್ರಕ್ರಿಯೆಯ **ದಿನಾಂಕ: 24.04.2023** ರಿಂದ ಪ್ರಾರಂಭ. ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ಜಾಲತಾಣ www.bcu.ac.in ಭೇಟಿ ನೀಡುವುದು.

ಅಗತ್ಯ ಸಂಖ್ಯೆಯ ಪ್ರವೇಶ ಅರ್ಜಿಗಳನ್ನು ಸಲ್ಲಿಸದಿದ್ದಲ್ಲಿ ಅಂತಹ ಕೋರ್ಸುಗಳನ್ನು ಪ್ರಸ್ತುತ ವರ್ಷ ಪ್ರಾರಂಭಿಸಲಾಗುವುದಿಲ್ಲ.

**ಕುಲಸಚಿವರು**

ಪ್ರತಿಗಳು:

1. ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು
2. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ), ವಿತ್ತಾಧಿಕಾರಿಗಳರವರ ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ.ಬೆಂಗಳೂರು.
3. ಡೀನರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
4. ಸಂಯೋಜಕರು, ಯು.ಯು.ಸಿ.ಎಮ್.ಎಸ್, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
5. ಕಛೇರಿ ಪ್ರತಿ/ರಕ್ಷಾ ಕಡತ.
6. ಅಂತರ್ಜಾಲದ ಪ್ರತಿ.